ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮಾಣಾಭಿವೃದ್ಧಿ, ವಕ್ಫ್ ಮಂತ್ರಿ ಮತ್ತು ವಸತಿ ಸಚಿವರು).—

ಅ) ನಿಜ.

ಆ) ೧) ಮೊದಲನೆ ಬಾರಿಗೆ ೧೯೭೯ರಲ್ಲಿ

೨) ಕೆಲವು ಮಾರ್ಪಾಡುಗಳೊಂದಿಗೆ ಜೂನ್ ೧೯೮೫ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

೩) ನಂತರ ಮತ್ತು ಕೆಲವು ಮಾರ್ಪಾಡುಗಳೊಂದಿಗೆ ಬೇರೆಯಾಗಿಯೇ ೧೯೮೭ರಲ್ಲಿ ಅಂತಿಮವಾಗಿ ಸಲ್ಲಿಸಲಾಗಿದೆ, ಸದರಿ ವಿಷಯವು ಸರಕಾರದ ಪರಿಶೀಲನೆಯಲ್ಲಿದೆ.

ರೋಣ ತಾಲ್ಲೂಕು ಬೆಳವಣಿಕೆ ಗ್ರಾಮಕ್ಕೆ ಕುಡಿಯುವ ನೀರಿನ ಪೂರೈಕೆ ಬಗ್ಗೆ.

೧೯೧೪. ಶ್ರೀ ಬಿ. ಆರ್. ಯಾವಗಲ್ (ನರಗುಂದ).—ಮಾನ್ಯ ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ತಾಲ್ಲೂಕು ಬೆಳವಂಕಿ ಗ್ರಾಮಕ್ಕೆ ಕುಡಿಯುವ ನೀರಿನ ಪೂರೈಕೆ ಯೋಜನೆ ಯಾವಾಗ ಮಂಜೂರಾಗಿದೆ ಮತ್ತು ಈಗ ಯಾವ ಹಂತದಲ್ಲಿದೆ, ಎಷ್ಟು ಹಣ ಖರ್ಚಾಗಿದೆ ?

ಆ) ಇದರ ವಿಳಂಬಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ೧. ದಿನಾಂಕ ೩೧-೩-೧೯೮೫ ರಂದು ೭.೮೫ ಲಕ್ಷ ರೂ.

೨. ಈ ಯೋಜನೆಯು, ಜಲಮೂಲ ಸ್ಥಾಪನೆ ಪಂಪುಮನೆ, ನೀರೆತ್ತುವ ಕೊಳವೆ ಮಾರ್ಗ ವಿತರಣಾ ಕೊಳವೆ ಕಾರ್ಯ ಮುಗಿದಿದ್ದು ಸಾರ್ವಜನಿಕ ನಲ್ಲಿಗಳು ಮತ್ತು ನೆಲ ಮಟ್ಟದ ಜಲಾಗಾರದ ಕೆಲಸ ಬಾಕಿ ಇದೆ.

೩. ೧೯೮೭ರ ಫೆಬ್ರುವರಿ ಮಾಹೆಯ ಕೊನೆಯ ವೇಳೆಗೆ ಒಟ್ಟು ರೂ. ೬.೦೮ ಲಕ್ಷಗಳು ಖರ್ಚಾಗಿದೆ.

ಆ) ರೈಲ್ವೇ ಕ್ರಾಸಿಂಗ್ ಇದ್ದು ಕೆಲಸಕ್ಕೆ ಪರವಾನಗಿ ದೊರೆಯುವುದು ತಡವಾದ್ದರಿಂದ ಈ ಯೋಜನೆಯ ಕೆಲಸ ತಡವಾಗಿದೆ.

ಹೊಳವನ ಹಳ್ಳಿ ಗ್ರಾಮದ ಹೊಸ ಬಡಾವಣೆಯಲ್ಲಿ ಮಂಜೂರಾದ ಜನತಾ ನಿವೇಶನಗಳ ಬಗ್ಗೆ.

೧೯೩೨. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊರಟಗೆರೆ ತಾಲ್ಲೂಕು ಹೊಳವನಹಳ್ಳಿ ಗ್ರಾಮದ ನಾಗರಕೆರೆಯ ಪಕ್ಕದ ಹೊಸ ಬಡಾವಣೆಯಲ್ಲಿ ಮಂಜೂರಾದ ಜನತಾ ನಿವೇಶನಗಳ ಸಂಖ್ಯೆ ಎಷ್ಟು ?

ಆ) ಯಾವ ಯಾವ ಜಾತಿಯವರಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿದೆ? (ಜಾತಿವಾರು ವಿವರ ನೀಡುವುದು)

ಇ) ಸದರಿ ನಿವೇಶನಗಳಲ್ಲಿ ಎಷ್ಟು ಮಂದಿಗೆ ಸರ್ಕಾರದವರು ಮನೆಗಳನ್ನು ನಿರ್ಮಿಸಿಕೊಳ್ಳಲು ಧನ ಸಹಾಯ ನೀಡಿದ್ದಾರೆ ? (ಯಾವ ಯಾವ ಜಾತಿಗೆ ಎಷ್ಟು ವಿವರ ನೀಡುವುದು)

ಈ) ಇನ್ನುಳಿದ ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸಲು ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮಾಭಿವೃದ್ಧಿ ಪಕ್ಷ ಮತ್ತು ವಸತಿ ಸಚಿವರು).—

ಅ) ೭೧

ಆ) ಅನುಬಂಧ 'ಅ' ನಲ್ಲಿ ಒದಗಿಸಿದೆ.

ಇ) ೨೫, ಜಾತಿವಾರು ವಾಹಿತಿಯನ್ನು ಅನುಬಂಧ 'ಇ' ನಲ್ಲಿ ಒಡಗಿಸಿದೆ.

ಈ) ೧೯೮೬-೮೭ನೇ ಸಾಲಿನ ಯೋಜನಾ ವರದಿಯಲ್ಲಿ ೧೦ ಮನೆಗಳನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಜಿಲ್ಲಾ ಯೋಜನಾಧಿಕಾರಿಗಳಿಗೆ ಸಲ್ಲಿಸಿದ್ದು ಇದೇ ರೀತಿ ಪ್ರತಿ ವರ್ಷವೂ ಮನೆಗಳನ್ನು ನಿರ್ಮಿಸಲು ಹಂತ ಹಂತವಾಗಿ ಆರ್ಥಿಕ ನೆರವನ್ನು ನೀಡಲಾಗುವುದು.

ಅನುಬಂಧ – ಎ

	ಜಾತಿಯ ಹೆಸರು	ಮಂಜೂರ್ಮಾಡಿರುವ ಒಟ್ಟು ನಿವೇಶನಗಳು
೧	ಹಂದಿಜೋಗಿ	೫
೨	ಹರಿಜನ	೧
೩	ಲಂಬಾಣಿ	೧
೪	ನಾಯಕ	೨೮
೫	ದೋಬಿ	೮
೬	ವೈಶ್ಯ	೩
೭	ಕುಂಟಾರ	೨
೮	ದಾಸರಿ	೩
೯	ಬ್ರಾಹ್ಮಣ	೧
೧೦	ಲಿಂಗಾಯಿತ	೨
೧೧	ಮುಸ್ಲಿಮ್	೧೪
೧೨	ಹೂವಾಡಿಗ	೧
೧೩	ದರ್ಜಿ	೨
	ಒಟ್ಟಿಗೆ	೭೧

ಅನುಬಂಧ – ಇ

	ಜಾತಿಯ ಹೆಸರು	ಮನೆ ಕಟ್ಟಲು ಆರ್ಥಿಕ ನೆರವು ಪಡೆದ ಫಲಾನುಭವಿಗಳ ಸಂಖ್ಯೆ
೧	ಹರಿಜನ	೧
೨	ನಾಯಕ	೧೫
೩	ಮುಸ್ಲಿಮ್	೨
೪	ದಾಸರಿ	೧
೫	ದೋಬಿ	೧
೬	ವೈಶ್ಯ	೧
೭	ಹಂದಿಜೋಗಿ	೪
	ಒಟ್ಟು	೨೫